117 (2)

"SATYAVADI" Founded 1917 Regd. No. M. 1230

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 28 | ಶನಿವಾರ 20—10—45 | ಬಿಡಿ ಪ್ರತಿ 3 ಪೈ

ಪ್ರಜಾಪ್ರತಿನಿಧಿ ಸಭೆ

ಮೈಸೂರು, ಅ 20 — ಪ್ರಧಾನ ಶಿರೋಮಣಿ ಮಾಧವರಾಯರ ಅಧ್ಯಕ್ಷತೆಯಲ್ಲಿ ಈ ದಿವಸದ ಸಭೆಯು ಪ್ರಶ್ನೋತ್ತರಗಳಿಂದ ಆರಂಭವಾಯಿತು.

ಪ್ರಶ್ನೋತ್ತರ ಕಾಲದಲ್ಲಿ ನಿಟ್ಟಿವಳ್ಳಿ ರಾಧ್ಯರು ಶ್ರೀ ಖಲೀಲರನ ಪ್ರಶ್ನೆಗೆ ಉತ್ತರವಾಗಿ 'ಮೈಸೂರು ನಗರದ ಹಳೆಯ ಭಾಗವನ್ನು ಅಭಿವೃದ್ಧಿ ಪಡಿಸುವ ವಿಷಯದಲ್ಲಿ ನಿರ್ದಿಷ್ಟವಾದ ಯೋಚನೆಯಿಲ್ಲ. ಮನೆ ಹತೋಟಿ ಅಜ್ಞೆ ಹೊರಟಾಗಿಂದ ಒಟ್ಟು ಎಂಟು ಮನೆಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದರು.

ಶ್ರೀ ಪಾವುಗಡ ನಂಜುಂಡರಾಯರು ಡಾ. ಶಿವರಾಜರವರ ಭಾಷಣವನ್ನು ಕುರಿತು ಅವಸರದ ಠರಾವೊಂದನ್ನು ಮಂಡಿಸಿದ್ದನ್ನು ಅಧ್ಯಕ್ಷರು ನಿರಾಕರಿಸಿದರು. ಇದರ ಸಲುವಾಗಿ ಐದು ನಿಮಿಷಗಳಕಾಲ ಸಭಾತ್ಯಾಗ ಮಾಡಿದರು.

ರೇಷ್ಮೆ ಹತೋಟಿ ಅಜ್ಞೆಯು ಜಾರಿಯಾದ ನಂತರ ಇದುವರೆಗೆ 556187 ಪೌಂಡುಗಳಷ್ಟು ಚಾರಕಾ ರೇಶ್ಮೆ ಡಿಪೋಗಳಿಗೆ ಬಂದವು; 515161 ಪೌಂಡುಗಳನ್ನು ಹರಾಜು ಮಾಡಲಾಗಿ 10760383 ರೂ. ಗಳು ಬಂದವೆಂದು ಶ್ರೀ ಮಲ್ಲರಾಧ್ಯರು ಉತ್ತರಿಸಿದರು.

ಸಂಸ್ಥಾನದಲ್ಲಿ ಪ್ರತಿಯೊಬ್ಬ ಜಮೀನುದಾರನಿಗೂ, ನೀರಾವರಿ ಸೌಕರ್ಯಗಳು ಮತ್ತು ಯಂತ್ರದ ನೇಗಿಲೂ ದೊರಯಿತಿದರದಲ್ಲಿ ದೊರೆಯುವಂತೆ ಸರ್ಕಾರದವರು ಒಂದು ಯೋಜನೆಕೈಗೊಳ್ಳಬೇಕೆಂದು ಶ್ರೀ ಅಣ್ಣಪ್ಪರೆಡ್ಡಿಯವರಿಂದ ಇಡಲ್ಪಟ್ಟಿದ್ದ ಠರಾವು ತೀವ್ರ ಚರ್ಚೆಯಾಗಿ, ಸರ್ಕಾರವು ಅನುಮೋದಿಸುವುದಾಗಿ ತಿಳಿಸಿತು.

ಸಭೆಯು ಮುಂಗಳವಾರದವರೆವಿಗೆ ನಡೆಯುವುದು. ಮುಂಗಳವಾರದ ದಿವಸ ಪ್ರಿವಿಲೇಜಸ್ ಮಂದಿ ಚರ್ಚೆಗೆ ಒರುವುದು. ಮೂರನೆ ಅಧಿವೇಶನ ನಡೆಸುವ ಬಗ್ಗೆ ಅಧ್ಯಕ್ಷರು ಆಲೋಚಿಸುವುದಾಗಿ ತಿಳಿಸಿದರು ಹೆಲ್ತ್ ಕಮಿಟಿ ಚುನಾವಣಾ ಪ್ರಯುಕ್ತ ಸಭೆ 5-20 ಕ್ಕೆ ಮುಗಿಯಿತು.

ದಸರಾ ಕಾಲದಲ್ಲಿ ಮೈಸೂರಿನಲ್ಲಿ ಎರಡೂವರೆ ಸಾವಿರ ಪಲ್ಲ ಅಕ್ಕಿ ಖರ್ಚಾಗಿರುವುದಾಗಿ ತಿಳಿಯಬಂದಿದೆ

ಶಾರದಾ ವಿಲಾಸ ಶಾಲೆಯ ನಿಧಿಗೆ ಪ್ರಧಾನ ಶಿರೋಮಣಿ ಮಾಧವರಾಯರು ಇಂದು ಸಾವಿರ ರೂ. ಉದಾರದಾನ ಮಾಡಿದ್ದಾರೆ.

ಇಂಡಿಯನ್ ನಾಷನಲ್ ಆರ್ಮಿ

ಶಿ

ಇಂಡಿಯನ್ ನಾಷನಲ್ ಆರ್ಮಿಯ ಸೈನ್ಯದಲ್ಲಿ ಸುಮಾರು 30 ಮಂದಿ ಮಾತ್ರ ವಿಚಾರಣೆಗೆ ಗುರಿಪಡಿಸಲಾಗುವುದೆಂದೂ ಬಹು ಮಂದಿಗ ಕರುಣೆ ತೋರಿಸಲಾಗುವುದೆಂದೂ ಡೆಲ್ಲಿಯ ವರ್ತಮಾನ.

ಜಾವಾದಲ್ಲಿ ಭೀಕರ ಕೃತ್ಯಗಳು ನಡೆದಿವೆ. ಸುರಬಯದಲ್ಲಿನ 30 ಸಾವಿರ ಹೆಂಗಸರು ಮಕ್ಕಳು ಜೈಲಿನಲ್ಲಿದ್ದಾರೆ, ಬಟಾವಿಯಾಕ್ಕೆ 20 ಮೈಲಿ ದೂರದಲ್ಲಿನ ಒಂದು ನಗರದಲ್ಲಿನ ಎಲ್ಲಾ ಮನೆಗಳೂ ಸುಟ್ಟು ಬೂದಿಯಾಗಿವೆ.

ರಷ್ಯಾದಲ್ಲಿ ವರ್ಷಕ್ಕೆ 1 ಲಕ್ಷ ಮನೆಗಳನ್ನು ಕಟ್ಟುವ ಯೋಜನೆ ನಡೆದಿದೆ. ನಾಜೀ ಹಾವಳಿಯಿಂದ ಅಲ್ಲಿಯ ಮನೆಗಳು ಹಾಳಾಗಿ ಹೋಗಿರುವವು.

ರಂಗಪುರ ಜಿಲ್ಲೆಯಲ್ಲಿ ಲಾಲ್‌ವೆಸಿರಾಡ್ ಎಂಬಲ್ಲಿದ ಎಗರ್ಜಾ ಪೂಜೆ ಸಂಬಂಧದಲ್ಲಿ ಕೋಮುವಾರು ಗಲಭೆಯಾತ ಪೋಲೀಸರು ಗುಂಡುಹಾರಿಸಿದರು. ಒಬ್ಬ ಹಿಂದುವು ಸತ್ತನೆಂದೂ, 22 ಮಂದಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ.



ಸ್ಪೈ || ಟ್ರೂಮನ್ ಜಪಾನ್ ಶರಣಾಗತಿಯನ್ನು ತಿಳಿಸುತ್ತಿರುವುದು

ವಿವಿಧ ವರ್ತಮಾನ

ಪ್ರಾಂತ ಸರಕಾರಗಳು ಇಸ್ಪಟ್ಟಲ್ಲಿ ವಾರ್ ಅಲೋಯನ್ಸನ್ನು ರದ್ದುಮಾಡಬಹುದೆಂದು ಭಾರತ ಸರಕಾರವು ಸೂಚಿಸಿದೆ.

ಇಂಡೋಚೀನಾದ ರಾಷ್ಟ್ರೀಯರೊಡನೆ ಸಂಧಾನ ನಡೆಸಲು ಫ್ರೆಂಚ್ ಸರಕಾರವು ಇಬ್ಬರು ಕಮಿಷನರನ್ನು ನೇಮಿಸಿದೆ.

ಪ್ಯಾಲಿಸ್ಟೈನಿನ ಬಗ್ಗೆ ಯಹೂದ್ಯ ಮತ್ತು ಅರಬ್ ಮುಖಂಡರೊಡನೆ ಸಮಾಲೋಚನೆ ನಡೆಸದೆ ಯಾವ ಕೊನೆಯ ಕ್ರಮವನ್ನೂ ಅಮೇರಿಕಾ ಸರಕಾರವು ಅನುಮೋದಿಸುವುದಿಲ್ಲವೆಂದು ಸ್ಟೇಟ್ ಸಕ್ರೆಟರಿಯವರು ಹೇಳಿರುವರು.

ಚನ್ನಗಿರಿಯಲ್ಲಿ ಕಳೆದ ತಾ | 13 ರಲ್ಲಿ ಬೆಳಿಗ್ಗೆ 7 ವರೆಯಿಂದ 9 ವರೆ ಗಂಟೆಯವರೆಗೆ ಆಕಾಶದಲ್ಲಿ ಸೂರ್ಯನ ಉತ್ತರಕ್ಕೆ ಪ್ರತಿ ಸೂರ್ಯನಂತೆ ಪ್ರಕಾಶವಾಗಿಯೂ ದುಂಡಾಗಿಯೂ ಕಾಣಬಂದುದಲ್ಲದೆ ಅದರಿಂದ ಬೆಳುಪಾದ ಬಾಲದಂತೆ ಮೋಡವು ಕಾಣಿಸಿತೆಂದೂ ಮುಂತಾಗಿ ಬೆಂಗಳೂರಿನ ಪತ್ರಿಕೆಯೊಂದಕ್ಕೆ ಒಬ್ಬ ಪತ್ತೀದಾರರು ತಿಳಿಸಿರುತ್ತಾರೆ.

ಚುಂಕಿಂಗಿನ ವಾರ್ತೆಯಂತೆ, ಜನರಲಿಸ್ಸೊ ಚಿಯಾಂಗ್ ಕೈಷೇಕರು ಕೈಗೊಳ್ಳಲಿರುವ ಅಮೇರಿಕಾ, ಬ್ರಿಟಿಷ್, ರಷ್ಯಾ ಮತ್ತು ಫ್ರಾನ್ಸುಗಳನ್ನು ಭೇಟಿ ಮಾಡುವ ಪ್ರವಾಸದಲ್ಲಿ ಅವರ ಪತಿಯವರೂ ಅವರ ಜೊತೆಯಲ್ಲಿ ಹೋಗುವರೆಂದು ಹೇಳಲಾಗಿದೆ.

ಚಾರಿತ್ರಿಕ ವಿಷಯ

ಫಕೀರನ ಶಾಪ

1869 ರಲ್ಲಿ ನವಶೇಠಾಕ್ಕೆ 5 ನೇ ಬಂಗಾಳಾ ಅಶ್ವಪಡೆಯು ಒಂದಾಗ ನಾಲ್ಕು ಮಂದಿ ಬ್ರಿಟಿಷ್ ಅಧಿಕಾರಿಗಳಿಗೆ ಸ್ಥಳ ಸಾಲದ್ದರಿಂದ, ಕ್ಯಾಪ್ಟನ್ ಆಂಡರ್‌ಸನ್ ಮತ್ತಿತರರು ಮನೆ ಕಟ್ಟಿಕೊಳ್ಳಲು ಸ್ಥಳಕ್ಕೆ ಅನುಮತಿ ಪಡೆದರು ಅವರು ಮನೆ ಕಟ್ಟಿಕೊಳ್ಳಬೇಕಾದ ಸ್ಥಳದಲ್ಲಿ ಒಬ್ಬ ಹಿಂದೂ ಫಕೀರನಿದ್ದನು. ಅವನನ್ನು ಎಬ್ಬಿಸಿದಾಗ, ಅವನು ಇವರನ್ನು ಕುರಿತು 'ನೀವೂ ಮತ್ತು ನಿಮ್ಮ ಮನೆಯೂ 7 ವರ್ಷಗಳಲ್ಲಿ ನಾಶವಾಗಲಿ' ಎಂದು ಶಾಪವಿತ್ತನು. ಹಾಗೇ ಆಯಿತು!

ಪ್ರಜಾಪ್ರತಿನಿಧಿ ಸಭೆ

(ಏಳನೆಯ ದಿವಸದ ಕಾರ್ಯಕ್ರಮ)

ಮೈಸೂರು, ಅ 19

ಪ್ರಧಾನ ಶಿರೋವಣಿ ಎಸ್.ಮಾಧವರಾಯರ ಅಧ್ಯಕ್ಷತೆಯಲ್ಲಿ 12 ಘಂಟೆಗೆ ಸಭೆ ಆರಂಭವಾಯಿತು.

ಪ್ರಶ್ನೋತ್ತರಗಳಾದನಂತರ ಠರಾವುಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು

'ಪ್ರಜಾಪತ್ತಾತ್ಮಕನಿಯಮಗಳ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರಜಾಪ್ರತಿನಿಧಿ ಸಭೆಯಿಂದ ಚುನಾಯಿತರಾದ ನಾಲ್ಕು ಮಂದಿ ಸದಸ್ಯರನ್ನೂ ಒಳಗೊಂಡ ಸಲಹೆಯ ಸಮಿತಿಯನ್ನು ರಚಿಸಬೇಕೆಂದು ಈ ಸಭೆಯವರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಸಲಹೆ ಮಾಡುವರು' ಎಂದು ಶ್ರೀ ಎಸ್.ಅಣ್ಣಪ್ಪಶೆಟ್ಟಿಯವರಿಂ ಮಂಡಿಸಲ್ಪಟ್ಟಿದ್ದ ಠರಾವನ್ನು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ಈ ಠರಾವಿನ ಪರವಾಗಿ ಶ್ರೀ ದೇವರಾಜೊಂಡಪ್ಪನವರೂ, ಶ್ರೀಮತಿ ಸುಬ್ಬಮ್ಮನವರೂ ಮತ್ತು ಇತರ ಸದಸ್ಯರುಗಳೂ ಮಾತನಾಡಿದರು. ಶ್ರೀ ಪಾವುಗಡ ನಂಜುಂಡರಾಯರು ಇದನ್ನು ತೀವ್ರವಾಗಿ ವಿರೋಧಿಸಿ ಈ ಠರಾವು ಬಹುಮತದಿಂದ ಗೆದ್ದಿತು.

'ಮುನಿಸಿಪಲ್, ಟೌನ್ ಮತ್ತು ಹೋಬಳಿ ಕಸಬೆಗಳಲ್ಲದ ಇತರ ಗ್ರಾಮಗಳಲ್ಲಾದರೂ ಹೆಂಡದಂಗಡಿಗಳನ್ನು ವಿಚಿಟಿಸಿ ಮಾದಕ ದ್ರವಗಳ ಮಾರಾಟವನ್ನು ನಿಶೇಧಿಸಬೇಕೆಂದು ಈ ಸಭೆಯವರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಸಲಹೆ ಮಾಡುತ್ತಾರೆ' ಎಂದು ಶ್ರೀ ಪಿ ಅಂಜನಪ್ಪನವರಿಂದ ಮಂಡಿಸಲ್ಪಟ್ಟಿದ್ದ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಹೊಡದಿಂದಾಗುವ ಅನೇಕ ಕಷ್ಟನಷ್ಟಗಳನ್ನು ಸದಸ್ಯರುಗಳು ತಿಳಿಸಿದರು. ಶ್ರೀ ದೇವರಾಜೆ ಅಂಸರೂ ಮತ್ತು ಮಿಡ್ಲ್ಟನ್ ಸಾಹೇಬರೂ ಇದನ್ನು ವಿರೋಧಿಸಿದರು.

ಚೀನಾದ ನಾರ್ಕಿಂಗ್ ಪ್ರಾಂತ್ಯದ ಇಲ್ಲಿಯ ಗೌರ್ನರ್ (ವಾರ್ ಲಾರ್ಡ್) ರನ್ನು ಕೇಂದ್ರ ಸರಕಾರವು ಬರತರಫು ಮಾಡಿದ್ದರಿಂದ ಅಲ್ಲಿ ಕಮ್ಯೂನಿಸ್ಟು ಇವರಿಗೂ ಕಮ್ಯೂನಿಸ್ಟೇತರ ಸೈನ್ಯಕ್ಕೂ ಕೈಕೈ ಹತ್ತಿ ಅಂತಃಕಲಹಕ್ಕೆ ಪ್ರಾರಂಭವಾಗಿದೆ.

---

1 ಕಸವಿದ್ದಲ್ಲಿ ಖಾಯಿಲೆ.

2 ಕಸನಸ್ಟಲ್ಲಾ ಮುನಿಸಿಪಲ್ ತಿಪ್ಪೆಯಲ್ಲೇ ಹಾಕಿರಿ. ನಿಮ್ಮ ಮಕ್ಕಳನ್ನು ರಸ್ತೆಗಳಲ್ಲಿ ಹೇಸಿಗೆ ಮಾಡಲು ಬಿಡಬೇಡಿರಿ.

[ಮೈ. ಪೌರಸಭಾ ಪ್ರಚಾರ ಸಮಿತಿ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

AT Opera—

2 nd Week

ರಂಜಿತ್, ಟಿ ಆರ್, ರಾಜಕುಮಾರಿ

ಕೆ. ಎಲ್. ವಿ. ವಸಂತ,

ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows

From 19-10-45

Hit Parade of 1943

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ, ಮೈಸೂರು

ಆ ಮು ಶಂ ಕೆ

ಆ ತಿ ಸಾ ರ ಗ ಳಿ ಗೆ

.... ಖಾತ್ರಿ ....

ಗು ಣ ಕಾ ರಿಯಾ ವ

ಡಿಸೆಂಟಿಸೆಡ್

ಲ

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.

— ಸ್ಟಾಕಿಸ್ಟರು —

ರಘುಲಾಲ್ ಅಂಡ್ ಕೊ.

ಟಿ. ಸಿ. ನಟರಾಜ್ ಅಂಡ್ ಕೊ.

— ಹಂಚುವವರು —

ಕಾಂತರಾಜ್ ಅಂಡ್ ಕೊ.

ರಂಗೇ ಬೀದಿ, ಮೈಸೂರು.

At Ranjit

Humayun

6 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂರ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್

ನೀಣಾ, ಸರ್ದಿಸ್, ಷಾ ನವಾಜ್

ಪಾತ್ರವಹಿಸಿರುವರು

ರಕ್ತವೃದ್ಧಿಗೆ—ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,

ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಒಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಸ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ

ಛೇರ್ಮನ್